ಅ) ಇಲ್ಲ

ಆ) ಇಲ್ಲ. ಏಕೆಂದರೆ ಈಗಾಗಲೇ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಹೇರೂರು ತೋಟಗಾರಿಕೆ ಕ್ಷೇತ್ರದಲ್ಲಿ ತರಬೇತಿ ಕೇಂದ್ರವಿದ್ದು, ತುಮಕೂರು ಜಿಲ್ಲೆಯ ರೈತರ ಮಕ್ಕಳಗಾಗಿಯೇ ಮೀಸಲಾಗಿದೆ. ಅಲ್ಲಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಸಹ ಸರ್ಕಾರದ ಮುಂದಿಲ್ಲ.

ತುಮಕೂರು ಡೇರಿಯಲ್ಲಿ ದುರಾಡಳಿತ

3575 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತುಮಕೂರು ಡೇರಿಯಲ್ಲಿ ದುರಾಡಳಿತದಿಂದ ದೊಡ್ಡ ಪ್ರಮಾಣದಲ್ಲಿ ಹಣದ ದುರುಪಯೋಗ ಮತ್ತು ನಿಧಿಯ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ, ಹೆಚ್ಚಿನ ಬೇಡಿಕೆ ಇವ್ವಾಗ್ಯೂ ಲಕ್ಷಾಂತರ ರೂಪಾಯಿಗಳ ಬೆಲೆಯ ಹಾಲು ಮತ್ತು ತುಪ್ಪವನ್ನು ಸುಟ್ಟು ಹಾಕಿರುವುದು ನಿಜವೇ?*

ಇ) *ಹಾಗಿದ್ದಲ್ಲಿ ಈ ಮೇಲ್ಕಂಡ ಡೇರಿಯಲ್ಲಿ ದುರಾಡಳಿತಕ್ಕೆ ಹೊಣೆಗಾರರಾದವರ ಮೇಲೆ ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಈ) *ಈ ಮೇಲ್ಕಂಡ ಡೇರಿಗೆ ಆಡಳಿತಗಾರರನ್ನು ನೇಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?*

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು):

ಅ) ನಿರ್ದಿಷ್ಟ ಪ್ರಕರಣಗಳನ್ನು ನಮೂದಿಸಿ ಯಾವುದೇ ದೂರುಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಬೆಂಗಳೂರು ಹಾಲು ಮಾರಾಟ ಮಳಿಗೆಗಳನ್ನು ಗುತ್ತಿಗೆ ನೀಡುವ ಬಗ್ಗೆ

3570 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದಲ್ಲಿರುವ ಹಾಲು ಮಾರಾಟ ಮಳಿಗೆಗಳ ಗುತ್ತಿಗೆಯನ್ನು ವಿಸ್ತರಿಸಿರುವ ಸಂಖ್ಯೆ ಎಷ್ಟು?*

ಆ) *ಈ ಗುತ್ತಿಗೆಗಳನ್ನು ವಿಸ್ತರಿಸಿದಾಗ ಎಲ್ಲಾ ಕಾನೂನು ಮತ್ತು ನಿಬಂಧನೆಗಳನ್ನು ಪಾಲಿಸಲಾಗಿದೆಯೇ?*

ಶ್ರೀ ಬಸವರಾಜ್ ಪಾಟೀಲ್ (ಪಶುಸಂಗೋಪನಾ ಮತ್ತು ಪಸುವೈದ್ಯ ಸೇವಾ ರಾಜ್ಯ ಸಚಿವರು):

ಅ) ಮೂರು.

ಆ) ಹೌದು.

ಸರ್ಕಾರವು ಮೀನು ಮರಿಗಳನ್ನು ಉತ್ಪಾದನೆ ಮಾಡುತ್ತಿರುವುದರ ಕುರಿತು

3672 - ಶ್ರೀ ಡಿ.ಎ. ಚಿನ್ನಪ್ಪ (ಮಡಕೇರಿ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಒಳನಾಡು ಅಂತರ್ಜಲಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸರ್ಕಾರವು ಮೀನು ಮರಿಗಳನ್ನು ಉತ್ಪಾದನೆ ಮಾಡುತ್ತಿರುವ ಸಂಗತಿ ನಿಜವೆ?

ಆ) ರಾಜ್ಯದಲ್ಲಿರುವ ಈ ರೀತಿಯ ಮೀನು ಮರಿ ಉತ್ಪಾದನಾ ಕೇಂದ್ರಗಳೆಷ್ಟು?

ಇ) 1989-90 ಮತ್ತು 1990-91ನೇ ಸಾಲಿನಲ್ಲಿ ರಾಜ್ಯದಲ್ಲಿ ಉತ್ಪಾದಿಸಲ್ಪಟ್ಟ ಮೀನು ಮರಿಗಳೆಷ್ಟು?

ಈ) ಈ ಸಾಲಿನಲ್ಲಿ ಮೀನು ಕೃಷಿಕರಿಗೆ ವಿತರಣೆ ಮಾಡಿದ ಮೀನು ಮರಿಗಳು (ಪಿಂಗ್‌ರ್‌ಲಿಂಗ್ಸ್) ಮಂಜೂರಾದ ಹಣ ಮತ್ತು ವೆಚ್ಚವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಉ) ಕೊಡಗೂ ಜಿಲ್ಲೆಗೆ ಮಂಜೂರಾದ ಒಟ್ಟು ಹಣ ಮತ್ತು ವೆಚ್ಚವೆಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಎ.ಎಮ್. ಬೆಳ್ಳಿಯಪ್ಪ (ಮೀನುಗಾರಿಕೆ, ಬಂದರು, ಮತ್ತು ಒಳನಾಡು ಅಂತರ್ಜಲಸಾರಿಗೆ ರಾಜ್ಯ ಮಂತ್ರಿಗಳು):

ಅ) ಹೌದು.

ಆ) 28.

ಇ) 1989-90 ಮತ್ತು 1990-91ರಲ್ಲಿ 27.84 ಕೋಟಿ ಮತ್ತು 27.05 ಕೋಟಿ ಮೀನು ಮರಿಗಳನ್ನು (ಫ್ಯಾಚಿಲಿಂಗ್ಸ್) ಕ್ರಮವಾಗಿ ಉತ್ಪಾದಿಸಲಾಗಿದೆ.

ಈ) ಮೇಲಿನ ಸಾಲಿನಲ್ಲಿ ಜಿಲ್ಲಾವಾರು ಮೀನು ಮರಿ ಭಿತ್ತನೆ, ವಿತರಣೆ, ಮಂಜೂರಾದ ಹಣ ಮತ್ತು ವೆಚ್ಚದ ವಿವರಗಳನ್ನು ಅನುಬಂಧ-I ರಲ್ಲಿ ನೀಡಲಾಗಿದೆ.

ಉ) 1989-90 ಮತ್ತು 1990-91ನೇ ಸಾಲಿನಲ್ಲಿ ಕೊಡಗು ಜಿಲ್ಲೆಗೆ ವಿವಿಧ ಇಲಾಖಾ ಯೋಜನೆಗಳನ್ನು ಕಾರ್ಯಗತಗೊಳಿಸಲು ನೀಡಲಾಗಿದ್ದು ಅನುಧಾನ ಮತ್ತು ವೆಚ್ಚದ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ಅನುಬಂಧ-II ರಲ್ಲಿ ನೀಡಲಾಗಿದೆ.